All India Radio: Bangalore

National Bulletin In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

30.06.2025 07.35 A.M.

**<><><><>**

ಮುಖ್ಯಾಂಶಗಳು

- ಇಂದಿನಿಂದ ಎರಡು ದಿನಗಳ ಉತ್ತರಪ್ರದೇಶ ಪ್ರವಾಸ ಕೈಗೊಳ್ಳಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು : ವಿವಿಧ ಕಾರ್ಯಕ್ರಮಗಳಲ್ಲಿ ಭಾಗಿ
- ಮಾವೋವಾದಿಗಳಿಗೆ ಶರಣಾಗತರಾಗಿ ಮುಖ್ಯ ವಾಹಿನಿಗೆ ಸೇರಿಕೊಳ್ಳುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಕರೆ
- ರ್‍ಯಾಗಿಂಗ್ ನಿಷೇಧ ನಿಯಮಾವಳಿಗಳ ಉಲ್ಲಂಘನೆ : ಐಐಟಿ, ಐಐಎಂ ಸೇರಿದಂತೆ ೮೯ ಶಿಕ್ಷಣ ಸಂಸ್ಥೆಗಳಿಗೆ ಯುಜಿಸಿ ನೋಟಿಸ್
- ಯುಎಸ್ ಓಪನ್ ಬ್ಯಾಡ್ಮಿಂಟನ್ : ಚೊಚ್ಚಲ  ಪ್ರಶಸ್ತಿ ಮುಡಿಗೇರಿಸಿಕೊಂಡ ಭಾರತದ ಆಯುಷ್ ಶೆಟ್ಟಿ

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದಿನಿಂದ ಎರಡು ದಿನಗಳ ಉತ್ತರ ಪ್ರದೇಶ ಪ್ರವಾಸ ಕೈಗೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಅವರು ಬರೇಲೀ ಮತ್ತು ಗೊರಖ್‌ಪೂರಿನಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

**ಈ ಕುರಿತು ಒಂದು ವರದಿ: (೧ ನಿಮಿಷ ೫ ಸೆಕೆಂಡ್‌ಗಳು)**

ಪ್ರವಾಸದ ಮೊದಲನೇ ದಿನ, ರಾಷ್ಟ್ರಪತಿ ದ್ರೌಪದಿ ಮುರ್ಮು ಬರೇಲಿಯಲ್ಲಿರುವ ಭಾರತೀಯ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆಯ ೧೧ನೇ ಘಟಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಈ ಸಮಾರಂಭದಲ್ಲಿ ಝಾರ್ಖಂಡ್ ರಾಜ್ಯಪಾಲ ಸಂತೋಷ್ ಗಂಗವಾರ್, ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಕೃಷಿ ರಾಜ್ಯ ಸಚಿವ ಭಗೀರಥ್ ಚೌಧರಿ ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮದ ನಂತರ ರಾಷ್ಟ್ರಪತಿ ಗೊರಖ್‌ಪೂರ್‌ಗೆ ಪ್ರಯಾಣ ಬೆಳೆಸಲಿಸಲಿದ್ದು, ಅಲ್ಲಿ ಅವರು ಮೂರು ಪ್ರಮುಖ ಸಂಸ್ಥೆಗಳಲ್ಲಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ರಾಷ್ಟ್ರಪತಿ ಅವರು ಗೊರಖ್‌ಪೂರ್‌ನ ಏಮ್ಸ್‌ನ ಮೊದಲ ಘಟಿಕೋತ್ಸವದಲ್ಲಿ ಪಾಲ್ಗೊಂಡು, ವಿದ್ಯಾರ್ಥಿಗಳಿಗೆ ಪದಕ ಪ್ರದಾನ ಮಾಡಲಿದ್ದಾರೆ. ಪ್ರವಾಸದ ಎರಡನೇ ದಿನವಾದ ನಾಳೆ, ರಾಷ್ಟ್ರಪತಿ ಉತ್ತರ ಪ್ರದೇಶದ ಮೊದಲ ಮಹಾಯೋಗಿ ಗುರು ಗೊರಖನಾಥ್ ಆಯುಷ್ ವಿಶ್ವವಿದ್ಯಾಲಯವನ್ನು ಉದ್ಘಾಟಿಸಲಿದ್ದಾರೆ. ಬಳಿಕ ಅವರು ಮಹಾಯೋಗಿ ಗೊರಖನಾಥ್ ವಿಶ್ವವಿದ್ಯಾಲಯದ ಆರೋಗ್ಯದಾಮ್ ಆವರಣದಲ್ಲಿ ನೂತನ ಶೈಕ್ಷಣಿಕ ಸಂಕೀರ್ಣ, ಸಭಾಂಗಣ,

ಪಂಚಕರ್ಮ ಕೇಂದ್ರ ಉದ್ಘಾಟನೆಯೊಂದಿಗೆ ವಿದ್ಯಾರ್ಥಿನಿಯರ ವಸತಿ ನಿಲಯದ ಶಿಲಾನ್ಯಾಸ ನೆರವೇರಿಸಲಿದ್ದಾರೆ. ಪ್ರವಾಸದ ಭಾಗವಾಗಿ ರಾಷ್ಟ್ರಪತಿ ಮುರ್ಮು ಅವರು ಗೊರಖನಾಥ ದೇವಸ್ಥಾನಕ್ಕೆ ಭೇಟಿ ನೀಡಲಿದ್ದು, ವಿಶೇಷ ದರ್ಶನ ಆಯೋಜಿಸಲಾಗಿದೆ. ರಾಷ್ಟ್ರಪತಿ ಅವರ ಪ್ರವಾಸದ ಹಿನ್ನೆಲೆಯಲ್ಲಿ ಬರೆಲೀ ಮತ್ತು ಗೊರಖ್‌ಪುರದಲ್ಲಿ ಕಠಿಣ ಭದ್ರತಾ ವ್ಯವಸ್ಥೆ ಕೈಗೊಳ್ಳಲಾಗಿದೆ.

<><><><>

ಸಶಸ್ತ್ರ ಮಾವೋವಾದಿಗಳೊಂದಿಗೆ ಯಾವುದೇ ಮಾತುಕತೆ ನಡೆಸುವುದಿಲ್ಲ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸ್ಪಷ್ಟಪಡಿಸಿದ್ದಾರೆ. ತೆಲಂಗಾಣದ ನಿಜಾಮಾಬಾದ್‌ನಲ್ಲಿ ನಡೆದ ಕಿಸಾನ್ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ಬುಡಕಟ್ಟು ಜನಾಂಗದವರು, ಪೊಲೀಸರು ಮತ್ತು ಭದ್ರತಾ ಸಿಬ್ಬಂದಿಯನ್ನು ಕೊಂದವರೊಂದಿಗೆ ಯಾವುದೇ ಮಾತುಕತೆ ಸಾಧ್ಯವಿಲ್ಲ ಎಂದು ಹೇಳಿದರು. ಎಡಪಂಥೀಯ ಉಗ್ರಗಾಮಿಗಳು, ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ರಾಷ್ಟ್ರೀಯ ಮುಖ್ಯವಾಹಿನಿಗೆ ಸೇರುವಂತೆ ಕರೆ ನೀಡಿದರು. ಮುಂದಿನ ವರ್ಷ ಮಾರ್ಚ್ ೩೧ ರೊಳಗೆ, ದೇಶವನ್ನು ಮಾವೋವಾದಿಗಳಿಂದ ಮುಕ್ತಗೊಳಿಸುವ ಕೇಂದ್ರದ ಸಂಕಲ್ಪವನ್ನು ಗೃಹ ಸಚಿವರು ಪುನರುಚ್ಚರಿಸಿದರು. ಪರಾರಿಯಾಗಿರುವ ಮಾವೋವಾದಿಗಳಿಗೆ ಕಾಂಗ್ರೆಸ್ ಪಕ್ಷ, ತೆಲಂಗಾಣದಲ್ಲಿ ಆಶ್ರಯ ನೀಡಬಹುದು ಎಂಬ ಆತಂಕ ವ್ಯಕ್ತಪಡಿಸಿದ ಅವರು, ತೆಲಂಗಾಣ ಮಾವೋವಾದಿಗಳ ಆಶ್ರಯತಾಣವಾಗಲು ಅವಕಾಶ ನೀಡಬಾರದೆಂದು ಮುಖ್ಯಮಂತ್ರಿ ಎ. ರೇವಂತ್ ರೆಡ್ಡಿ ಅವರಿಗೆ ಹೇಳಿದರು.

**ಧ್ವನಿ : ಅಮಿತ್ ಶಾ (೧೮ ಸೆಕೆಂಡ್‌ಗಳು)**

<><><><>

ರೈಲು ಹೊರಡುವ ೮ ಗಂಟೆಗಳ ಮೊದಲು ಕಾಯ್ದಿರಿಸಿದ ಸೀಟುಗಳ ಪಟ್ಟಿ ತಯಾರಿಸುವುದನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸುವಂತೆ ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ರೈಲ್ವೆ ಮಂಡಳಿಗೆ ನಿರ್ದೇಶನ ನೀಡಿದ್ದಾರೆ. ಈ ಕ್ರಮದಿಂದಾಗಿ ವೇಟಿಂಗ್ ಟಿಕೆಟ್ ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಅನುಕೂಲವಾಗಲಿದೆ. ದಿನದ ಮಧ್ಯಾಹ್ನ ೨ ಗಂಟೆಗಿಂತಲೂ ಮೊದಲು ಹೊರಡುವ ರೈಲುಗಳಿಗಾಗಿ ಹಿಂದಿನ ದಿನದ ರಾತ್ರಿ ೯ ಗಂಟೆಯ ವೇಳೆಗೆ ಪಟ್ಟಿ ತಯಾರಿಸಬೇಕಿದೆ. ಟಿಕೆಟ್ ವ್ಯವಸ್ಥೆ ಪಾರದರ್ಶಕ, ಸರಳ ಮತ್ತು ಪರಿಣಾಮಕಾರಿಯಾಗಿ ಇರಬೇಕೆಂದು ಸಚಿವ ಅಶ್ವಿನಿ ವೈಷ್ಣವ್ ಒತ್ತಿ ಹೇಳಿದ್ದಾರೆ. ರೈಲ್ವೆ ಇಲಾಖೆ ಟಿಕೆಟ್ ಬುಕ್ಕಿಂಗ್ ವ್ಯವಸ್ಥೆಯನ್ನು ಸರಳಗೊಳಿಸಲು ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದ್ದು, ನವೀಕರಿಸಿದ ಆಧುನಿಕ ಪ್ರಯಾಣಿಕ ಕಾಯ್ದಿರಿಸುವ ವ್ಯವಸ್ಥೆ ಮೊದಲಿಗಿಂತ ೧೦ ಪಟ್ಟು ಟಿಕೆಟ್ ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಪ್ರತಿ ನಿಮಿಷಕ್ಕೆ ೧ ಲಕ್ಷದ ೫೦ ಸಾವಿರ ರೈಲು ಟಿಕೆಟ್‌ಗಳನ್ನು ಉತ್ಪಾದಿಸುವ ಸಾಮರ್ಥ್ಯ ಈ ವ್ಯವಸ್ಥೆಗೆ ಇದೆ. ಅದು ಈಗಿನ ೩೨ ಸಾವಿರ ಟಿಕೆಟ್ ಸಾಮರ್ಥ್ಯಕ್ಕೆ ಹೋಲಿಸಿದರೆ

೫ ಪಟ್ಟು ಹೆಚ್ಚಿದೆ ಎಂದು ರೈಲ್ವೆ ಸಚಿವಾಲಯ ತಿಳಿಸಿದೆ. ಈ ನವೀಕರಿಸಿದ ಟಿಕೆಟ್ ವ್ಯವಸ್ಥೆ ಈ ವರ್ಷದ ಕೊನೆಯೊಳಗೆ ಜಾರಿಗೆ ಬರುವ ನಿರೀಕ್ಷೆ ಇದೆ.

<><><><>

ಧರ್ಮಶಾಲಾದ ತಪೋವನದಲ್ಲಿಂದು ನಡೆಯಲಿರುವ ಕಾಮನ್‌ವೆಲ್ತ್ ಸಂಸದೀಯ ಸಂಸ್ಥೆ ವಲಯ-೨ರ ವಾರ್ಷಿಕ ಸಮ್ಮೇಳನವನ್ನು ಲೋಕಸಭಾ ಅಧ್ಯಕ್ಷ ಓಂ ಬಿರ್ಲಾ ಉದ್ಘಾಟಿಸಲಿದ್ದಾರೆ. ಈ ವಲಯದಲ್ಲಿ ದೆಹಲಿ, ಹರಿಯಾಣ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಪಂಜಾಬ್ ರಾಜ್ಯಗಳು ಸೇರಿವೆ. ಪ್ರಜಾಪ್ರಭುತ್ವದ ಸಂಸ್ಥೆಗಳನ್ನು ಬಲಪಡಿಸುವುದು, ಉತ್ತಮ ಅಭ್ಯಾಸಗಳನ್ನು ಹಂಚಿಕೊಳ್ಳುವುದು ಮತ್ತು ಆಧುನಿಕ ಯುಗದಲ್ಲಿ ಆಡಳಿತ ಮತ್ತು ಶಾಸನಾತ್ಮಕ ಕಾರ್ಯಚಟುವಟಿಕೆಗೆ ಹೊಸ ಮಾರ್ಗಗಳನ್ನು ಅನ್ವೇಷಿಸುವುದು ಈ ಸಮ್ಮೇಳನದ ಉದ್ದೇಶವಾಗಿದೆ.

ಡಿಜಿಟಲ್ ಯುಗದಲ್ಲಿ ಉತ್ತಮ ಆಡಳಿತ - ಸಂಪನ್ಮೂಲ ನಿರ್ವಹಣೆ, ಪ್ರಜಾಪ್ರಭುತ್ವದ ರಕ್ಷಣೆ ಮತ್ತು ನಾವೀನ್ಯತೆಯ ಅಳವಡಿಕೆ, ಈ ವರ್ಷದ ಸಮ್ಮೇಳನದ ಘೋಷವಾಕ್ಯವಾಗಿದೆ.

<><><><>

ವಿಶ್ವವಿದ್ಯಾಲಯ ಧನಸಹಾಯ ಆಯೋಗ ದೇಶದಾದ್ಯಂತ ನಾಲ್ಕು ಐಐಟಿಗಳು, ಮೂರು ಐಐಎಂಗಳೂ ಸೇರಿದಂತೆ, ೮೯ ಶೈಕ್ಷಣಿಕ ಸಂಸ್ಥೆಗಳಿಗೆ, ರ್‍ಯಾಗಿಂಗ್ ನಿಷೇಧ ಸಂಬಂಧಿತ ನಿಯಮಾವಳಿಗಳನ್ನು ಪಾಲಿಸದ ಕಾರಣ ನೋಟಿಸ್ ಜಾರಿ ಮಾಡಿದೆ. ರ್‍ಯಾಗಿಂಗ್ ಕುರಿತು ೨೦೦೯ ರ ಯುಜಿಸಿ ನಿಯಮಾವಳಿಗಳ ಪ್ರಕಾರ, ಪ್ರತಿಯೊಂದು ಯುಜಿಸಿಗೆ ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳಿಂದ ಪ್ರತಿಜ್ಞಾಪತ್ರ ಹಾಗೂ ಸಂಸ್ಥೆಯಿಂದ ಅನುಸರಣಾ ಪತ್ರ ಸಲ್ಲಿಸುವುದು ಕಡ್ಡಾಯವಾಗಿದೆ. ಆದರೆ, ಹಲವು ಸಂಸ್ಥೆಗಳು ಕಡ್ಡಾಯ ಪ್ರತಿಜ್ಞಾಪತ್ರಗಳು ಮತ್ತು ಅನುಸರಣಾ ಪತ್ರಗಳನ್ನು ಸಲ್ಲಿಸಿಲ್ಲ ಎಂದು ಯುಜಿಸಿಯ ನೋಟಿಸ್ ತಿಳಿಸಿದೆ. ಈ ನಿಯಮಾವಳಿಗಳ ಅನುಸರಣೆ ಕೇವಲ ನಿಯಮಾತ್ಮಕ ವಿಷಯವಷ್ಟೇ ಅಲ್ಲದೇ, ರ್‍ಯಾಗಿಂಗ್ ಸಂಬಂಧಿತ ಮಾನಸಿಕ ಒತ್ತಡ ಮತ್ತು ಶೋಷಣೆಯ ಬಗ್ಗೆ ಹೆಚ್ಚುತ್ತಿರುವ ಆತಂಕದ ನಡುವೆಯಲ್ಲಿ, ವಿದ್ಯಾರ್ಥಿಗಳ ಸುರಕ್ಷತೆಯೂ ಅತ್ಯಂತ ಮುಖ್ಯವಾಗಿದೆ. ಉಲ್ಲೇಖಿಸಲಾದ ಐಐಟಿಗಳಲ್ಲಿ ಐಐಟಿ ಬಾಂಬೆ, ಐಐಟಿ ಖರಗ್‌ಪುರ, ಐಐಟಿ ಪಾಲಕ್ಕಾಡ್ ಮತ್ತು ಐಐಟಿ ಹೈದರಾಬಾದ್ ಸೇರಿವೆ. ಐಐಎಂ ಬಾಂಬೆ, ಐಐಎಂ ರೋಹ್ತಕ್ ಮತ್ತು ಐಐಎಂ ತಿರುಚಿರಪ್ಪಳ್ಳಿ ಕೂಡ ಇದರಲ್ಲಿ ಸೇರಿವೆ. ಇದೇ ರೀತಿಯಾಗಿ, ಏಮ್ಸ್ ರಾಯಬರೇಲಿ ಹಾಗೂ ರಾಷ್ಟ್ರೀಯ ವಿನ್ಯಾಸ ಸಂಸ್ಥೆ ದೆಹಲಿ, ಆಂಧ್ರ ಪ್ರದೇಶ ಮತ್ತು ಹರಿಯಾಣದಲ್ಲಿನ ಶಾಖೆಗಳಿಂದಲೂ ನಿಯಮ ಉಲ್ಲಂಘನೆಯಾಗಿವೆ ಎಂದು ಯುಜಿಸಿ ತಿಳಿಸಿದೆ.

<><><><>

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರ ಆಹ್ವಾನದ ಮೇರೆಗೆ, ನಾಳೆ ನಡೆಯಲಿರುವ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ಭಾಗವಹಿಸಲು, ವಿದೇಶಾಂಗ ಸಚಿವ

ಎಸ್. ಜೈಶಂಕರ್ ಇಂದಿನಿಂದ, ಮೂರು ದಿನಗಳ ಅಧಿಕೃತ ಅಮೆರಿಕ ಪ್ರವಾಸ ಕೈಗೊಳ್ಳಲಿದ್ದಾರೆ. ಮುಕ್ತ ಇಂಡೋ-ಪೆಸಿಫಿಕ್‌ಗಾಗಿ ಸಾಮಾನ್ಯ ದೃಷ್ಟಿಕೋನವನ್ನು ಮುನ್ನಡೆಸುವ ಹೊಸ ಪ್ರಸ್ತಾಪಗಳ ಮೇಲೆ, ಕ್ವಾಡ್ ಗುಂಪು ಗಮನ ಕೇಂದ್ರೀಕರಿಸುತ್ತದೆ ಎಂದು ವಿದೇಶಾಂಗ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿಂದು, 'ಭಯೋತ್ಪಾದನೆಯ ಮಾನವ ವೆಚ್ಚ" ಎಂಬ ಶೀರ್ಷಿಕೆಯ ಪ್ರದರ್ಶನವನ್ನು ಡಾ. ಜೈಶಂಕರ್ ಉದ್ಘಾಟಿಸಲಿದ್ದಾರೆ. ವಿಶ್ವಾದ್ಯಂತ ಭಯೋತ್ಪಾದಕ ಕೃತ್ಯಗಳ ವಿನಾಶಕಾರಿ ಪರಿಣಾಮ ಹಾಗೂ ಭಯೋತ್ಪಾದನೆ ಎದುರಿಸಲು ಅಂತಾರಾಷ್ಟ್ರೀಯ ಸಮುದಾಯ ತೆಗೆದುಕೊಂಡ ಕ್ರಮಗಳನ್ನು ಈ ಪ್ರದರ್ಶನ, ಪ್ರತಿಬಿಂಬಿಸುತ್ತದೆ.

<><><><>

ಇರಾನಿನ ಮೇಲೆ ಅಮೆರಿಕದ ಇತ್ತೀಚಿನ ವಾಯುದಾಳಿಗಳು ಇರಾನ್‌ನ ಪರಮಾಣು ಕಾರ್ಯಕ್ರಮವನ್ನು "ನಿರ್ಮೂಲನೆ ಮಾಡಿವೆ" ಎಂಬ ಹೇಳಿಕೆಗಳ ಬಗ್ಗೆ ವಿಶ್ವಸಂಸ್ಥೆಯ ಪರಮಾಣು ಕಣ್ಗಾವಲು ಸಂಸ್ಥೆಯ ಮುಖ್ಯಸ್ಥರು ಗಂಭೀರ ಅನುಮಾನ ವ್ಯಕ್ತಪಡಿಸಿದ್ದಾರೆ. ಸುದ್ದಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ, ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ ಮಹಾನಿರ್ದೇಶಕ ರಾಫೆಲ್ ಗ್ರೋಸಿ, ಟೆಹ್ರಾನ್ , ಇನ್ನು ಕೆಲವೇ ದಿನಗಳಲ್ಲಿ ಪರಮಾಣು ಕಾರ್ಯಕ್ರಮವನ್ನು ಪುನರುಜ್ಜೀವನಗೊಳಿಸುವ ಸಾಮರ್ಥ್ಯ ಹೊಂದಿದೆ ಎಂದು ಹೇಳಿದ್ದಾರೆ. ಅಮೆರಿಕದ ವೈಮಾನಿಕ ದಾಳಿಯಿಂದ, ಅದು ತೀವ್ರವಾಗಿ ಹಾನಿಗೊಂಡಿದ್ದರೂ, ಸಂಪೂರ್ಣ ವಿನಾಶಗೊಂಡಿಲ್ಲ, ಇರಾನ್ ತನ್ನ ಚಟುವಟಿಕೆಗಳನ್ನು ಪುನರುಜ್ಜೀವನಗೊಳಿಸಲು ಅಗತ್ಯವಾದ ತಾಂತ್ರಿಕ ಮತ್ತು ಕೈಗಾರಿಕಾ ನೆಲೆಯನ್ನು ಉಳಿಸಿಕೊಂಡಿದೆ ಎಂದು ಗ್ರೋಸಿ ವಿವರಿಸಿದ್ದಾರೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಅಮೆರಿಕ ಇರಾನ್‌ನ ಪರಮಾಣು ಮೂಲಸೌಕರ್ಯವನ್ನು ಸಂಪೂರ್ಣವಾಗಿ ನಾಶಪಡಿಸಿದೆ ಎಂದು ಹೇಳಿಕೆ ನೀಡಿದ್ದರು.

<><><><>

ಯುಎಸ್ ಓಪನ್ ಬ್ಯಾಡ್ಮಿಂಟನ್‌ನಲ್ಲಿ, ೨೦ ವರ್ಷದ ಆಯುಷ್ ಶೆಟ್ಟಿ ಪ್ರಶಸ್ತಿ ಗೆಲ್ಲುವ ಮೂಲಕ ಈ ಋತುವಿನಲ್ಲಿ ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್ ಪ್ರಶಸ್ತಿಯನ್ನು ಗೆದ್ದ, ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಫೈನಲ್‌ನಲ್ಲಿ ಕೆನಡಾದ ಬ್ರಿಯಾನ್ ಯಾಂಗ್ ವಿರುದ್ಧ ೨೧-೧೮, ೨೧-೧೩ ಅಂತರದ ಭರ್ಜರಿ ಜಯ ಸಾಧಿಸುವ ಮೂಲಕ ಆಯುಷ್, ಇತಿಹಾಸ ನಿರ್ಮಿಸಿದ್ದಾರೆ. ಆರಂಭದಿಂದಲೂ ಪಂದ್ಯದ ಮೇಲೆ ಹಿಡಿತ ಸಾಧಿಸಿದ ಆಯುಷ್, ಕೆನಡಾದ ಶಟ್ಲರ್ ಗೆ ಸೋಲಿನ ಹಾದಿ ತೋರಿಸಿದರು. ಸೆಮಿಫೈನಲ್ ಪಂದ್ಯದಲ್ಲಿ ಆಯುಷ್, ವಿಶ್ವದ ೬ ನೇ ಶ್ರೇಯಾಂಕಿತ ಚೌ ಟಿಯೆನ್ ಚೆನ್ ಅವರನ್ನು ಸೋಲಿಸುವ ಮೂಲಕ ಭರವಸೆ ಮೂಡಿಸಿದ್ದರು. ಈ ಪ್ರಶಸ್ತಿಯೊಂದಿಗೆ ಆಯುಷ್ ಶೆಟ್ಟಿ, ಬಿಡಬ್ಲ್ಯೂಎಫ್ ವರ್ಲ್ಡ್ ಟೂರ್ ನಲ್ಲಿ ಚೊಚ್ಚಲ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದಲ್ಲದೆ, ೨೦೨೩ ರ ಕೆನಡಾ ಓಪನ್ ನಂತರ, ವಿದೇಶಿ ನೆಲದಲ್ಲಿ

ಬಿಡಬ್ಲ್ಯೂಎಫ್ ಟೂರ್‌ನಲ್ಲಿ ಭಾರತಕ್ಕೆ ಮೊದಲ ಪುರುಷರ ಸಿಂಗಲ್ಸ್ ಪ್ರಶಸ್ತಿಯನ್ನು ತಂದುಕೊಟ್ಟ ಹೆಗ್ಗಳಿಕೆಗೆ ಭಾಜನರಾದರು. ಈ ನಡುವೆ, ಮಹಿಳಾ ಸಿಂಗಲ್ಸ್‌ನಲ್ಲಿ, ತನ್ವಿ ಶರ್ಮಾ ಅಗ್ರ ಶ್ರೇಯಾಂಕಿತ ಬೀವೆನ್ ಜಾಂಗ್ ವಿರುದ್ಧ ೧೧-೨೧, ೨೧-೧೮, ೧೦-೨೧ ಅಂತರದಲ್ಲಿ ಪರಾಭವಗೊಂಡು, ರನ್ನರ್-ಅಪ್ ಸ್ಥಾನಕ್ಕೆ ತೃಪ್ತಿಹೊಂದಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಯವಾಯಿತು <><>